ದಿನಾಂಕಃ 03.12.2024

OS 9/2021 ಪಿ.ಡಬ್ಲ್ಯೂ 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಹೆಚ್ ಎಂ ವಕೀಲರಿಂದಃ</u>

**1.** ನೀವು ಈ ಹಿಂದೆ **1991** ರಲ್ಲಿ ಜಮೀನಿನ ಅಳತೆ ಆಗಿತ್ತು ಎಂದು ಹೇಳಿದ್ದೀರಿ ಆ ಬಾಬ್ತು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ನನ್ನ ಬಳಿ ಇದ್ದಲ್ಲಿ ಹಾಜರು ಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ. ಸದರಿ ದಾಖಲಾತಿಗಳನ್ನು ಸರ್ವೆ ಇಲಾಖೆಯಿಂದ ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ತೊಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಪಿಃ **34** ನಕ್ಷೆಯಲ್ಲಿ ಬಣ್ಣ ಹಾಕಿರುವ ಜಾಗ ರಸ್ತೆಯಿಂದ ಪೂರ್ವಕ್ಕೆ ಇರುವ ಜಾಗ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಪಿಃ **34** ರ ಸರ್ವೆ ನಂಬರ್ **219** ರ ಉತ್ತರಕ್ಕೆ ತೋರಿಸಿರುವ ಗೆರೆಗಳು ಹಳ್ಳ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಅದನ್ನು ಈಗ ಗಾಡಿ ಜಾಡು ರಸ್ತೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಜಾಗದಲ್ಲಿ ಈಗಲೂ ದೊಡ್ಡ ಹಳ್ಳ ಇದೆ ರಸ್ತೆ ಇಲ್ಲ ಎಂದರೆ ಸಾಕ್ಷಿ ರಸ್ತೆ ಇದೆ ಎಂದು ಉತ್ತರಿಸುತ್ತಾರೆ. ನಿಪಿಃ **34** ರಲ್ಲಿ ಉತ್ತರದಿಂದ ದಕ್ಷಿಣಕ್ಕೆ ಚುಕ್ಕೆ ಆಕಾರದಲ್ಲಿ ತೋರಿಸಿರುವಂತಹ ಜಾಗ ನನ್ನ ಜಮೀನಿನ ಮೇಲೆ ಹಾದು ಹೋಗಿರುವ ರಸ್ತೆ ಮತ್ತು ನನ್ನ ಉಳಿಕೆ ಜಾಗ. ನೀವು ಹಾಜರು ಪಡಿಸಿರುವ ನಿಪಿಃ **30** ರಿಂದ **40** ರಲ್ಲಿ ಪ್ರತಿವಾದಿಯರ ಸಹಿ ಇಲ್ಲ ಎಂದರೆ ಸಾಕ್ಷಿ ಅಳತೆ ಕಾರ್ಯಕ್ಕೆ ಹಾಜರಾಗಲು ನೋಟೀಸ್ ಕೊಟ್ಟರೂ ಸಹ ಅವರು ಹಾಜರಾಗಿಲ್ಲ ಎಂದು ಉತ್ತರಿಸುತ್ತಾರೆ. ಅವರಿಗೆ ಯಾವುದೇ ನೋಟೀಸ್ ಜಾರಿಯೂ ಆಗಿಲ್ಲ, ಅಳತೆಯೂ ಆಗಿಲ್ಲ ಎಂದರೆ ಸಾಕ್ಷಿ ನೋಟೀಸ್ ಜಾರಿಯಾಗಿದೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗಳಿಗೆ ತಿಳಿಯದಂತೆ ನೀವು ಮತ್ತು ಸರ್ವೆ ಇಲಾಖೆಯವರು ಶಾಮೀಲಾಗಿ ಮೇಲೆ ಹೇಳಿದ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**2.** ಕಮಲಮ್ಮ ಕೋಂ ದಾಸೇಗೌಡ ರವರು ಮಹಾಬಲ ರವರಿಗೆ ದಿಃ **15.11.1967** ರಲ್ಲಿ ಬರೆದುಕೊಟ್ಟಿರುವ ಕ್ರಯ ಪತ್ರ ಹಾಜರು ಪಡಿಸಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು

ಉತ್ತರಿಸುತ್ತಾರೆ. ಸದರಿ ಕ್ರಯ ಪತ್ರ ನಿಪಿಃ 28 ಆಗಿದ್ದು, ಅದರಲ್ಲಿ ಪೂರ್ವದ ಚಕ್ಕುಬಂದಿ ಚೆನ್ನಪ್ಪನವರ ಜಮೀನು ಎಂದು ನಮೂದು ಇದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಡಿಃ 2 ಕ್ರಯ ಪತ್ರದಲ್ಲಿ ಪೂರ್ವದ ಚಕ್ಕುಬಂದಿ ದೇಶಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದು ನಮೂದು ಇದೆ ಎಂದರೆ ಸಾಕ್ಷಿ ಅದನ್ನು ತಪ್ಪಾಗಿ ಬರೆಸಿಕೊಂಡಿದ್ದಾರೆ ಎಂದು ನಾನು ಈಗಾಗಲೇ ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ಹಾಗೆಯೇ ನಿಡಿಃ1 ದಿಃ 05.09.2006 ರಂದು ಎಂ ಎಲ್ ಕೃಷ್ಣರವರು ಯಶೋದಮ್ಮರವರಿಂದ ಖರೀದಿಸಿದ ಸ್ವತ್ತಿನ ಕ್ರಯ ಪತ್ರದಲ್ಲಿ ಪೂರ್ವದ ಚಕ್ಕುಬಂದಿ ಸಹ ದೇಶಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಎಂದು ನಮೂದು ಇದೆ ಎಂದರೆ ಸಾಕ್ಷಿ ಅದನ್ನು ತಪ್ಪಾಗಿ ಬರೆಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿಃ 3 ದಿಃ 03.09.1986 ರ ಕ್ರಯ ಪತ್ರದಲ್ಲಿ ಪೂರ್ವದ ಚಕ್ಕುಬಂದಿ ಸಹ ದೇಶಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಎಂದು ನಮೂದು ಇದೆ ಎಂದರೆ ಸಾಕ್ಷಿ ಅದನ್ನು ತಪ್ಪಾಗಿ ಬರೆಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿಃ4 ರ ಕ್ರಯ ಪತ್ರದಲ್ಲಿ ಸಹ ಪೂರ್ವದ ಚಕ್ಕುಬಂದಿ ಸಹ ದೇಶಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಎಂದು ನಮೂದು ಇದೆ ಎಂದರೆ ಸಾಕ್ಷಿ ತಪ್ಪು ಆ ರೀತಿ ನಮೂದು ಇಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಡಿಃ 4 ಅನ್ನು ತೋರಿಸಿ ಪೂರ್ವದ ಚಕ್ಕುಬಂದಿ ಓದುವಂತೆ ಸೂಚಿಸಿದ್ದು, ಸದರಿಯವರು ಪೂರ್ವಕ್ಕೆ ದೇಶಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಮತ್ತು ಅವರದೇ ಉಳಿಕೆ ಜಮೀನು ಎಂದು ಓದಿರುತ್ತಾರೆ. ಎಂ ಎಲ್ ಕೃಷ್ಣ ರವರಾಗಲೀ, ವಸ್ತ್ರೇಗೌಡರಾಗಲೀ, ಮರಿಕೆಂಚಯ್ಯನವರಾಗಲೀ ಪೂರ್ವದ ಚಕ್ಕುಬಂದಿ ತಪ್ಪಾಗಿದೆ ಎಂದು ಏನಾದರೂ ತಿದ್ದುಪಡಿಮಾಡಿಕೊಳ್ಳಲುಪ್ರಯತ್ನ ಪಟ್ಟಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸುಳ್ಳು ದಾಖಲಾತಿಗಳನ್ನು ಸಲ್ಲಿಸಿ ಸಾಧ್ಯವಾದರೆ ಪ್ರತಿವಾದಿಗಳ ಜಮೀನನ್ನು ಕಬಳಿಸಲು ಪ್ರಯತ್ನಿಸುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ

ಮದ್ದೂರು.